ಕರ್ನಾಟಕ ರಾಜ್ಯ ಹಣಕಾಸು ಸಂಸ್ಥೆ
1951ರ ರಾಜ್ಯ ಹಣಕಾಸು ಸಂಸ್ಥೆಗಳ ಕಾಯಿದೆ ಅನ್ವಯ ಸ್ಥಾಪಿತ
**KARNATAKA STATE FINANCIAL CORPORATION**
Established under the State Financial Corporation' Act, 1951

ಸಂಖ್ಯೆ : ಕ.ರಾ.ಹ.ಸಂ./ಪ್ರ.ಕ./ 2-897/2022-23
Ref. No. KSFC/HO/

ದಿನಾಂಕ : 20/10/202
Date

ಸುತ್ತೋಲೆ-11

ವಿಷಯ: ಶಾಖಾ ವ್ಯವಸ್ಥಾಪಕರು ಕೇಂದ್ರ ಸ್ಥಾನದಲ್ಲಿಯೇ ವಾಸ್ತವ್ಯ ಇರುವ ಬಗ್ಗೆ.

*~*~*

ಅನೇಕ ಶಾಖಾ ವ್ಯವಸ್ಥಾಪಕರು ಕೇಂದ್ರ ಸ್ಥಾನದಲ್ಲಿ ವಾಸ್ತವ್ಯ ಹೂಡದೆ ಇತರೆ ಸ್ಥಳಗಳಲ್ಲಿ ವಾಸ್ತವ್ಯ ಹೂಡಿರುವುದರಿಂದ ಪ್ರತಿ ದಿನ ಕೇಂದ್ರ ಸ್ಥಾನದಿಂದ ತಾವು ವಾಸ್ತವ್ಯ ಹೂಡಿರುವ ಸ್ಥಳಕ್ಕೆ ಪ್ರಯಾಣ ಮಾಡುವುದರಿಂದ ಶಾಖೆಯ ದೈನಂದಿನ ಕೆಲಸ ಕಾರ್ಯಗಳಿಗೆ ತೊಂದರೆಯಾಗಿರುವುದನ್ನು ಗಮನಿಸಲಾಗಿದೆ.

ಸಂಸ್ಥೆಯ ಸೇವೆಗಳನ್ನು ಪಡೆಯುವ ಸಲುವಾಗಿ ಶಾಖೆಗಳಿಗೆ ಭೇಟಿ ನೀಡುವ ಗ್ರಾಹಕರಿಗೆ ಉತ್ತಮ ಸೇವೆ ನೀಡುವ ಸಲುವಾಗಿ ಹಾಗೂ ಶಾಖೆಯ ದೈನಂದಿನ ಕೆಲಸಕಾರ್ಯಗಳು ಸುಗಮವಾಗಿ ನಡೆಯುವ ಸಲುವಾಗಿ ಎಲ್ಲಾ ಶಾಖಾ ವ್ಯವಸ್ಥಾಪಕರು ತಮ್ಮ ಕೇಂದ್ರ ಸ್ಥಾನದಲ್ಲೇ ವಾಸ್ತವ್ಯ ಹೂಡಬೇಕೆಂದು ಈ ಮೂಲಕ ಆದೇಶಿಸಿದೆ. ಶಾಖಾ ವ್ಯವಸ್ಥಾಪಕರು ಕೇಂದ್ರ ಸ್ಥಾನವನ್ನು ಬಿಡ ಬೇಕಾದ ಸಂದರ್ಭದಲ್ಲಿ ಸಕಾರಣಗಳನ್ನು ನೀಡಿ ಸಂಬಂಧಿಸಿದ ಕಾರ್ಯ ನಿರ್ವಾಹಕ ನಿರ್ದೇಶಕರವರ ಪೂರ್ವಾನುಮತಿ ಪಡೆಯಲು ಸೂಚಿಸಿದೆ.

ಈ ಮೇಲಿನ ಸೂಚನೆಗಳನ್ನು ಉಲ್ಲಂಘಿಸಿ ಕೇಂದ್ರ ಸ್ಥಾನದಲ್ಲಿ ವಾಸ್ತವ್ಯವಿರದ ಅಥವಾ ಸಕ್ಷಮ ಪ್ರಾಧಿಕಾರಿಯವರ ಪೂರ್ವಾನುಮತಿ ಪಡೆಯದೇ ಕೇಂದ್ರ ಸ್ಥಾನದಲ್ಲಿ ಲಭ್ಯವಿಲ್ಲದ ಶಾಖಾ ವ್ಯವಸ್ಥಾಪಕರ ವಿರುದ್ಧ ಸಂಸ್ಥೆಯ ಸಿಬ್ಬಂದಿ ನಿಯಮಾವಳಿಗಳಡಿಯಲ್ಲಿ ಶಿಸ್ತುಕ್ರಮಕ್ಕೆ ಕೈಗೊಳ್ಳಲಾಗುವುದೆಂದು ಈ ಮೂಲಕ ತಿಳಿಯಪಡಿಸಿದೆ.

ವ್ಯವಸ್ಥಾಪಕ ನಿರ್ದೇಶಕರು

ಗೆ:

ಎಲ್ಲಾ ಶಾಖಾ ವ್ಯವಸ್ಥಾಪಕರುಗಳಿಗೆ
ಎಲ್ಲಾ ಆಲೆಪ ಕೋಶದ ಮುಖ್ಯಸ್ಥರುಗಳಿಗೆ
ಎಲ್ಲಾ ಪ್ರಧಾನ ವ್ಯವಸ್ಥಾಪಕರುಗಳಿಗೆ
ಕಾರ್ಯ ನಿರ್ವಾಹಕ ನಿರ್ದೇಶಕರು –
ಗ್ರಂಥಾಲಯ, ಸೂಚನಾ ಫಲಕಕ್ಕೆ,
ಕಛೇರಿ ಪ್ರತಿ.

ಪ್ರಧಾನ ಕಛೇರಿ : ಕೆ.ಎಸ್.ಎಫ್.ಸಿ. ಭವನ, ನಂ. 1/1, ತಿಮ್ಮಯ್ಯ ರಸ್ತೆ, ಕಂಟೋನ್ಮೆಂಟ್ ರೈಲ್ವೆ ನಿಲ್ದಾಣದ ಹತ್ತಿರ, ಬೆಂಗಳೂರು – 560 05
ದೂರವಾಣಿ ಸಂಖ್ಯೆ – ಸಾಮಾನ್ಯ : 080–22263322 ಇ–ಮೇಲ್: info@ksfc.in ವೆಬ್ : https://ksfc.karnataka.gov.in
**Head Office :** KSFC Bhavana, # 1/1, Thimmaiah Road, Near Cantonment Railway Station, Bengaluru-560 05:
**Telephone :** Gen : 080-22263322 **e-mail :** info@ksfc.in **Website :** https://ksfc.karnataka.gov.in

ಕರ್ನಾಟಕ ರಾಜ್ಯ ಹಣಕಾಸು ಸಂಸ್ಥೆ
1951ರ ರಾಜ್ಯ ಹಣಕಾಸು ಸಂಸ್ಥೆಗಳ ಕಾಯಿದೆ ಅನ್ವಯ ಸ್ಥಾಪಿತ
KARNATAKA STATE FINANCIAL CORPORATION
Established under the State Financial Corporation' Act, 1951

ಸಂಖ್ಯೆ : ಕ.ರಾ.ಹ.ಸಂ./ಪ್ರಕ./ ವಿ - 898/2022-23
Ref. No. KSFC/HO/

ದಿನಾಂಕ : 20/10/2022
Date

ಸುತ್ತೋಲೆ-12

ವಿಷಯ: ಅಧಿಕಾರಿಗಳು ತಾವು ನಿರ್ವಹಿಸಿದ ದೈನಂದಿನ ಕಾರ್ಯ ಚಟುವಟಿಕೆಗಳ ಕುರಿತು ದಿನಚರಿ ಸಲ್ಲಿಸುವ ಬಗ್ಗೆ.

*~*~*

ಎಲ್ಲಾ ಶಾಖಾ ವ್ಯವಸ್ಥಾಪಕರು, ತಾಂತ್ರಿಕ ಅಧಿಕಾರಿಗಳು, ಕಾನೂನು ಹಾಗೂ ವಸೂಲಾತಿ ಅಧಿಕಾರಿಗಳು ತಾವು ನಿರ್ವಹಿಸಿದ ಸಂಸ್ಥೆಯ ದೈನಂದಿನ ಕಾರ್ಯ ಚಟುವಟಿಕೆಗಳ ಕುರಿತಂತೆ ತಮ್ಮ ದಿನಚರಿಯನ್ನು 15 ದಿನಗಳಿಗೆ ಒಮ್ಮೆ ಸಂಬಂಧಿಸಿದ ಎಲ್ಲಾ ದಾಖಲೆಗಳನ್ನು ಲಗತ್ತಿಸಿ ಈ ಕೆಳಕಂಡ ನಮೂನೆಯಲ್ಲಿ ಸಂಬಂಧಿಸಿದ ಪ್ರಧಾನ ವ್ಯವಸ್ಥಾಪಕರುಗಳಿಗೆ ಸಲ್ಲಿಸಲು ಆದೇಶಿಸಲಾಗಿದೆ. ಶಾಖಾ ವ್ಯವಸ್ಥಾಪಕರುಗಳನ್ನು ಹೊರತುಪಡಿಸಿ ಉಳಿದ ಅಧಿಕಾರಿಗಳು ತಮ್ಮ ದೈನಂದಿನ ದಿನಚರಿಯನ್ನು ಶಾಖಾ ವ್ಯವಸ್ಥಾಪಕರ ಮೂಲಕ ಪ್ರಧಾನ ವ್ಯವಸ್ಥಾಪಕರುಗಳಿಗೆ ಸಲ್ಲಿಸತಕ್ಕದ್ದು.

ಅಧಿಕಾರಿಯ ಹೆಸರು :
ಪದನಾಮ :
ಶಾಖೆ :

| ದಿನಾಂಕ | ಸ್ಥಳ | ನಿರ್ವಹಿಸಿದ ದೈನಂದಿನ ಕಾರ್ಯ ಚಟುವಟಿಕೆಗಳ ವಿವರ | ಷರಾ |
|---|---|---|---|
| | | | |

ಸಂಬಂಧಿಸಿದ ಪ್ರಧಾನ ವ್ಯವಸ್ಥಾಪಕರು, ಶಾಖಾ ವ್ಯವಸ್ಥಾಪಕರು ಮತ್ತು ಇತರೆ ಅಧಿಕಾರಿಗಳು ಸಲ್ಲಿಸಿದ ದಿನಚರಿಯನ್ನು ಪರಾಮರ್ಶಿಸಿ, ಅವಶ್ಯವೆನಿಸಿದಲ್ಲಿ ಕಾರ್ಯ ನಿರ್ವಾಹಕ ನಿರ್ದೇಶಕರ ಗಮನಕ್ಕೆ ತಂದು, ಕಾಲಕಾಲಕ್ಕೆ ಅವಶ್ಯವಿರುವ ಸಲಹೆ ಸೂಚನೆ / ಆದೇಶಗಳನ್ನು ನೀಡಲು ಸೂಚಿಸಿದೆ. ಈ ಸೂಚನೆಗಳನ್ನು ಪಾಲಿಸದಿರುವ ಅಧಿಕಾರಿಗಳ ವಿವರಗಳನ್ನು ಕಾರ್ಯನಿರ್ವಾಹಕ ನಿರ್ದೇಶಕರ ಮೂಲಕ ವ್ಯವಸ್ಥಾಪಕ ನಿರ್ದೇಶಕರ ಗಮನಕ್ಕೆ ತರಲು ಸೂಚಿಸಿದೆ.

Elusoop Cam
ವ್ಯವಸ್ಥಾಪಕ ನಿರ್ದೇಶಕರು

ಗೆ:

ಎಲ್ಲಾ ಶಾಖಾ ವ್ಯವಸ್ಥಾಪಕರುಗಳಿಗೆ
ಎಲ್ಲಾ ಆಲೆಪ ಕೋಶದ ಮುಖ್ಯಸ್ಥರುಗಳಿಗೆ
ಎಲ್ಲಾ ಪ್ರಧಾನ ವ್ಯವಸ್ಥಾಪಕರುಗಳಿಗೆ
ಕಾರ್ಯ ನಿರ್ವಾಹಕ ನಿರ್ದೇಶಕರು –
ಗ್ರಂಥಾಲಯ, ಸೂಚನಾ ಫಲಕಕ್ಕೆ,
ಕಛೇರಿ ಪ್ರತಿ.

ಕರ್ನಾಟಕ ರಾಜ್ಯ ಹಣಕಾಸು ಸಂಸ್ಥೆ
1951ರ ರಾಜ್ಯ ಹಣಕಾಸು ಸಂಸ್ಥೆಗಳ ಕಾಯಿದೆ ಅನ್ವಯ ಸ್ಥಾಪಿತ
KARNATAKA STATE FINANCIAL CORPORATION
Established under the State Financial Corporation' Act, 1951

ಸಂಖ್ಯೆ : ಕ.ರಾ.ಹ.ಸಂ./ಪ್ರಕ./ 2-899/2022-23
Ref. No. KSFC/HO/

ದಿನಾಂಕ 20/10/2022
Date

ಸುತ್ತೋಲೆ- 13

ವಿಷಯ: ಶಾಖಾ ಕಛೇರಿಗಳಲ್ಲಿ ಸಂದರ್ಶಕರ ಪುಸ್ತಕವನ್ನು ನಿರ್ವಹಿಸುವ ಬಗ್ಗೆ.

*~*~*

ಎಲ್ಲಾ ಶಾಖಾ ಕಛೇರಿಗಳಿಗೆ ಭೇಟಿ ನೀಡುವ ಗ್ರಾಹಕರು/ ಸಂದರ್ಶಕರುಗಳ ವಿವರಗಳುಳ್ಳ ಪುಸ್ತಕವನ್ನು ನಿರ್ವಹಿಸುವಂತೆ ಈಗಾಗಲೇ ಸೂಚಿಸಲಾಗಿರುತ್ತದೆ. ಆದಾಗ್ಯೂ ಕೆಲವೊಂದು ಶಾಖಾ ಕಛೇರಿಗಳಿಗೆ ಸಂಸ್ಥೆಯ ಉನ್ನತ ಅಧಿಕಾರಿಗಳು ಭೇಟಿ ನೀಡಿದ ಸಂದರ್ಭಗಳಲ್ಲಿ ಸದರಿ ಪುಸ್ತಕವನ್ನು ನಿರ್ವಹಿಸದೇ ಇರುವುದು ಕಂಡು ಬಂದಿರುತ್ತದೆ.

ಗ್ರಾಹಕರ / ಸಂದರ್ಶಕರ ವಿವರಗಳು ಸಂಸ್ಥೆಯ ಕಾರ್ಯ ಚಟುವಟಿಕೆಗಳನ್ನು ಸುಸೂತ್ರವಾಗಿ ನಿರ್ವಹಿಸಲು ಸಹಕಾರಿಯಾಗುತ್ತದೆ. ಆದುದರಿಂದ ಸಂಸ್ಥೆಯ ಎಲ್ಲಾ ಶಾಖಾ ಕಛೇರಿಗಳಲ್ಲಿ ಸಂದರ್ಶಕರ ಪುಸ್ತಕವನ್ನು ಈ ಕೆಳಕಂಡ ನಮೂನೆಯಲ್ಲಿ ತಕ್ಷಣದಿಂದ ಜಾರಿಗೆ ಬರುವಂತೆ ನಿರ್ವಹಿಸಲು ಆದೇಶಿಸಲಾಗಿದೆ.

ದಿನಾಂಕ :

| ಕ್ರ. ಸಂ | ಸಂದರ್ಶಕರ ಹೆಸರು | ವಿಳಾಸ | ದೂರವಾಣಿ ಸಂಖ್ಯೆ | ಭೇಟಿ ಮಾಡುವ ಅಧಿಕಾರಿ | ಭೇಟಿಯ ಕಾರಣ | ಸಂದರ್ಶಕರ ಸಹಿ |
|---|---|---|---|---|---|---|
| | | | | | | |

ಸಂದರ್ಶಕರ ಪುಸ್ತಕವನ್ನು ನಿರ್ವಹಿಸಿ ಅಗತ್ಯ ಮಾಹಿತಿಯನ್ನು ದಾಖಲಿಸಿರುವ ಬಗ್ಗೆ ಪುರಾವೆಯಾಗಿ ಸದರಿ ಪುಸ್ತಕದ ಪ್ರತಿಯನ್ನು 15 ದಿನಗಳಿಗೆ ಒಮ್ಮೆ ಸಂಬಂಧಿಸಿದ ಪ್ರಧಾನ ವ್ಯವಸ್ಥಾಪಕರುಗಳಿಗೆ ಸಲ್ಲಿಸಲು ಹಾಗೂ ಸಂಸ್ಥೆಯ ಹಿರಿಯ ಅಧಿಕಾರಿಗಳು ಹಾಗೂ ಆಲೆಪ ಅಧಿಕಾರಿಗಳು ಶಾಖೆಗಳಿಗೆ ಭೇಟಿ ನೀಡಿದ ಸಂದರ್ಭದಲ್ಲಿ ಈ ಪುಸ್ತಕವನ್ನು ನಿರ್ವಹಿಸಿರುವ ಬಗ್ಗೆ ಪರಿಶೀಲಿಸಲು ಸೂಚಿಸಿದೆ.

Shoop Cam
ವ್ಯವಸ್ಥಾಪಕ ನಿರ್ದೇಶಕರು

ಗೆ:

ಎಲ್ಲಾ ಶಾಖಾ ವ್ಯವಸ್ಥಾಪಕರುಗಳಿಗೆ
ಎಲ್ಲಾ ಆಲೆಪ ಕೋಶದ ಮುಖ್ಯಸ್ಥರುಗಳಿಗೆ
ಎಲ್ಲಾ ಪ್ರಧಾನ ವ್ಯವಸ್ಥಾಪಕರುಗಳಿಗೆ
ಕಾರ್ಯ ನಿರ್ವಾಹಕ ನಿರ್ದೇಶಕರು –
ಗ್ರಂಥಾಲಯ, ಸೂಚನಾ ಫಲಕಕ್ಕೆ,
ಕಛೇರಿ ಪ್ರತಿ.

ಪ್ರಧಾನ ಕಛೇರಿ : ಕೆ.ಎಸ್.ಎಫ್.ಸಿ. ಭವನ, ನಂ. 1/1, ತಿಮ್ಮಯ್ಯ ರಸ್ತೆ, ಕಂಟೋನ್ಮೆಂಟ್ ರೈಲ್ವೆ ನಿಲ್ದಾಣದ ಹತ್ತಿರ, ಬೆಂಗಳೂರು – 560 052
ದೂರವಾಣಿ ಸಂಖ್ಯೆ – ಸಾಮಾನ್ಯ : 080-22263322 ಇ-ಮೇಲ್: info@ksfc.in ವೆಬ್ : https://ksfc.karnataka.gov.in
Head Office : KSFC Bhavana, # 1/1, Thimmaiah Road, Near Cantonment Railway Station, Bengaluru-560 052
Telephone : Gen : 080-22263322 e-mail : info@ksfc.in Website : https://ksfc.karnataka.gov.in